18696 ನೆಮ್ಮದಿ ಕೇಂದ್ರಗಳಲ್ಲಿ ದಿ:18–02–2009 ರವರೆಗೆ ಸ್ವೀಕೃತವಾಗಿರುವ 11,608 ಅರ್ಜಿಗಳಲ್ಲಿ ಇದುವರೆಗೆ 9,280 ತಾತ್ಕಾಲಿಕ ಪಡಿತರ ಚೀಟಿ ವಿತರಿಸಲಾಗಿವೆ. ಉಳಿದ 2,328 ಪಡಿತರ ಚೀಟಿಗಳನ್ನು ವಿತರಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ.

ಆನಾಸ 42 ಡಿಆರ್‌ಎ 2009

(ಹೆಚ್.ಹಾಲಪ್ಪ)
ಆಹಾರ ಮತ್ತು ನಾಗರಿಕ ಸರಬರಾಜು
ಮತ್ತು ಗ್ರಾಹಕ ವ್ಯವಹಾರಗಳ ಸಚಿವರು

<u>ಕರ್ನಾಟಕ ವಿಧಾನ ಸಭೆ</u>

347 ಶ್ರೀ ಕುಮಾರಸ್ವಾಮಿ ಕೆ.ಜಿ.

ಮಾನ್ಯ ತೋಟಗಾರಿಕೆ ಹಾಗೂ ಬಂಧಿಖಾನೆ ಸಚಿವರು

ಅ) ಶಿವಮೊಗ್ಗ ನಗರದ ಹೃದಯ ಭಾಗದಲ್ಲಿರುವ ಬಂಧಿಖಾನೆಯನ್ನು ನಗರದ ಹೊರವಲಯದ ಅಗಸಹಳ್ಳಿ ಗ್ರಾಮದಲ್ಲಿ ಲಭ್ಯವಿರುವ ಸುಮಾರು 600 ಎಕರೆ (ಸರ್ವೆ ನಂ.107) ಸರ್ಕಾರಿ ಜಮೀನಿಗೆ ಸ್ಥಳಾಂತರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ;

ಹಾಲಿ ಕಾರ್ಯ ನಿರ್ವಹಿಸುತ್ತಿರುವ ಜಿಲ್ಲಾ ಕಾರಾಗೃಹವನ್ನು ನಗರದ ಹೊರವಲಯದ ಅನುಪಿನಕಟ್ಟೆ ಗ್ರಾಮದ ಸರ್ವೆ ನಂ.126ರಲ್ಲಿನ 80 ಎಕರೆ ಜಮೀನಿನಲ್ಲಿ ನೂತನ ಜಿಲ್ಲಾ ಕಾರಾಗೃಹವನ್ನು ನಿರ್ಮಾಣ ಮಾಡಿ. ಅಲ್ಲಿಗೆ ಸ್ಥಳಾಂತರಿಸಲು ಸರ್ಕಾರವು ತೀರ್ಮಾನಿಸಿದೆ.

ಆ) ಹಾಗಿದ್ದಲ್ಲಿ, ಬಂಧಿಖಾನೆ ನಿರ್ಮಾಣಕ್ಕೆ ಕಾಯ್ದಿರಿಸಿರುವ ಅಂದಾಜು ವೆಚ್ಚವೆಷ್ಟು?

ಕಾರಾಗೃಹ ಹಾಗೂ ವಸತಿ ಗೃಹಗಳ ನಿರ್ಮಾಣದ ಸಲುವಾಗಿ ರೂ.20.00 ಕೋಟಿಗಳ ರೇಖಾ ಅಂದಾಜನ್ನು ತಾತ್ವಿಕವಾಗಿ ಅನುಮೋದಿಸಿದ್ದು, ಸವಿವರ ನಕ್ಷೆ ಹಾಗೂ ಅಂದಾಜುಗಳನ್ನು ಒಪ್ಪಿಸಲು ಲೋಕೋಪಯೋಗಿ ಇಲಾಖೆಯನ್ನು ಕೋರಿದ್ದು, ಅಂದಾಜನ್ನು ನಿರೀಕ್ಷಿಸಲಾಗಿದೆ. ಅಂದಾಜನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಇ) ಈ ರೀತಿ ಸ್ಥಳಾಂತರದಿಂದ ಲಭ್ಯವಾಗುವ ಸುಮಾರು 55 ಎಕರೆ ಜಮೀನನ್ನು ಸಾರ್ವಜನಿಕ ಉದ್ದೇಶಗಳಿಗೆ ಬಳಸಲಾಗುವುದೇ (ವಿವರ ನೀಡುವುದು);

ಇಂತಹ ಯಾವುದೇ ತೀರ್ಮಾನವನ್ನು ಸದ್ಯಕ್ಕೆ ತೆಗೆದುಕೊಂಡಿರುವುದಿಲ್ಲ.

ಈ) ಈ ಜಾಗದಲ್ಲಿ ಸಾರ್ವಜನಿಕರಿಗಾಗಿ ಒಂದು ಬೃಹತ್ ಕ್ರೀಡಾಂಗಣವನ್ನು ಮತ್ತು ಬಹುಮಹಡಿ ಕಟ್ಟಡ ಮಾದರಿಯಲ್ಲಿ ಕಛೇರಿ ಸಂಕೀರ್ಣವನ್ನು ಕಟ್ಟಿ ಹಾಲಿ

ನಗರದಲ್ಲಿ ಬಾಡಿಗೆ ಕಟ್ಟಡದಲ್ಲಿರುವ ಎಲ್ಲಾ ಸರ್ಕಾರಿ ಕಛೇರಿಗಳನ್ನು ಒಂದೇ ಕಡೆ ತರುವ ಆಲೋಚನೆ ಸರ್ಕಾರದ ಮುಂದಿದೆಯೇ;

ಇಂತಹ ಯಾವುದೇ ತೀರ್ಮಾನವನ್ನು ಸದ್ಯಕ್ಕೆ ತೆಗೆದುಕೊಂಡಿರುವುದಿಲ್ಲ.

ಊ) ಹಾಗಿದ್ದಲ್ಲಿ ಈ ಕಾರ್ಯವನ್ನು ಯಾವಾಗ ಆರಂಭಿಸಲಾಗುವುದು (ವಿವರ ನೀಡುವುದು)

ಸಂಖ್ಯೆ:ಹೆಚ್‌ಡಿ 58 ಪಿಆರ್‌ಎ 2009

ಸಹಿ/-
(ಉಮೇಶ್ ವಿ. ಕತ್ತಿ)
ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು

(ಟಿ. ಕೃಷ್ಣಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಸೆರಮನೆ ಮತ್ತು ಸಿನಿಮಾ)

ಕರ್ನಾಟಕ ವಿಧಾನ ಸಭೆ

349 ಶ್ರೀ ಅಪ್ಪಾಸಾಹೇಬ ಮಲ್ಲಪ್ಪ ಪಟ್ಟಣಶೆಟ್ಟಿ
ಕೃಷಿ ಸಚಿವರು

ಅ) ರಾಜ್ಯದಲ್ಲಿ ವಿದರ್ಭ ಪ್ಯಾಕೇಜ್ ಲಾಭವನ್ನು ಪಡೆಯುತ್ತಿರುವ ಜಿಲ್ಲೆಗಳು/ಪ್ರದೇಶಗಳು ಯಾವುವು? ವಿಧರ್ಬ ಪ್ಯಾಕೇಜ್‌ನ ಉದ್ದೇಶಗಳೇನು?

ರಾಜ್ಯದಲ್ಲಿ ಮಾನ್ಯ ಪ್ರಧಾನ ಮಂತ್ರಿಗಳ ಪುನರ್ವಸತಿ ಪ್ಯಾಕೇಜದಲ್ಲಿ ಇರುವ ಜಿಲ್ಲೆಗಳು ಬೆಳಗಾಂ, ಶಿವಮೊಗ್ಗ ಚಿತ್ರದುರ್ಗ, ಚಿಕ್ಕಮಗಳೂರು, ಹಾಸನ ಮತ್ತು ಕೊಡಗು ಮಾನ್ಯ ಪ್ರಧಾನ ಮಂತ್ರಿಗಳ ಪುನರ್ವಸತಿ ಪ್ಯಾಕೇಜನ್ನು (ವಿದರ್ಭ ಪ್ಯಾಕೇಜ್) ಸಂಕಷ್ಟದಲ್ಲಿರುವ ರೈತರಿಗೆ ವಿವಿಧ ಯೋಜನೆಯಡಿಯಲ್ಲಿ ಸಹಾಯಧನ ನೀಡುವುದು ಮತ್ತು ರೈತರ ಅಭಿವೃದ್ಧಿಗೆ ಸಾಧ್ಯವಾಗುವ ಸುಸ್ಥಿರ ಬೇಸಾಯ ಪದ್ಧತಿಗಳನ್ನು ಅಳವಡಿಸುವುದು ಮುಖ್ಯ ಉದ್ದೇಶ.

ಆ) ಹೊಸದಾಗಿ ಯಾವ ಯಾವ ಜಿಲ್ಲೆಗಳನ್ನು ಈ ಯೋಜನೆಯಡಿ ಸೇರಿಸಲು ಸರ್ಕಾರ ಕ್ರಮ ಕೈಗೊಂಡಿದೆ?

ಈ ಕಾರ್ಯಕ್ರಮಕ್ಕೆ ಹೆಚ್ಚಿನ ಜಿಲ್ಲೆಗಳನ್ನು ಸೇರಿಸಲು ಅವಕಾಶವಿರುವುದಿಲ್ಲ.

ಇ) ವಿಜಾಪುರ ಜಿಲ್ಲೆಯ ರೈತರು ಕಳೆದ 5–6 (ಐದಾರು)ವರ್ಷಗಳಿಂದ ಮಳೆ ಇಲ್ಲದೆ ಬರಗಾಲಕ್ಕೆ ತುತ್ತಾಗಿ ಆತ್ಮಹತ್ಯೆಗೆ ಶರಣಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?